ಹೊತ್ತಿರಲಿ; ನನಗೆ ವರದಿ ಕೊಡಿ.'

'ಸರಿ ಸರ್.'

ಮರಳಿ ಬಂದವರ ಟೇಬಲ್ಲಿನ ಮೇಲೆ ಆಸ್ಪತ್ರೆಯ ಪುಸ್ತಕವಿತ್ತು. ಯೂನಿಟ್ಟಿನ ಇಬ್ಬರು ಮಲೇರಿಯದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಮಲೇರಿಯ ಅಂದರೆ ಓಸಿ ಸಿಟ್ಟಾಗಿ ಯಾಕೆ? ಏನು? ಅಂತ ಸುರುಮಾಡುತ್ತಾರೆ. ಓಆರ್ ಲೈನಿಗೆ ಹೋಗಿ ಸೊಳ್ಳೆಪರದೆ ಮತ್ತಿತರ ಮಲೇರಿಯಾ ಮುನ್ನೆಚ್ಚರಿಕೆ ತಪಾಸಣೆ ಮಾಡಿ, ಆಸ್ಪತ್ರೆಗೂ ಹೋಗಿ ಇಬ್ಬರನ್ನ ನೋಡಿಬಂದು ಓಸಿಗೆ ವರದಿ ಕೊಟ್ಟು ಬರುವಾಗ ಮೆಸ್ಸಿಂದ ಚಹಾ ಬಂತು. ಚಹ ಕುಡಿಯುವಾಗ ನೆನಪಾಗಿ ಗಡಿಬಿಡಿಯಲ್ಲಿ ಮುಗಿಸಿ, ಆರ್ಡರ್ ಪುಸ್ತಕ ಎತ್ತಿಕೊಂಡರು. ಮೂರುಜನರ ಎರಡು ತಂಡ ಮಾಡಿ, ಪ್ರತಿ ತಂಡಕ್ಕೂ ಒಬ್ಬ ಜೇಸಿಓ ಮುಖಂಡನಾಗಿರುವಂತೆ ಲಿಸ್ಟು ತಯಾರಾಯ್ತು. ಓಸಿಯೆದುರಿಟ್ಟು ಅಪ್ರೂವ್ ಮಾಡಿಸಿಕೊಂಡರು. ಸಾಯಂಕಾಲದ ರೋಲ್‌ಕಾಲಿನಲ್ಲಿ ಕೆಳಗಿನವರಿಗೆ ಈ ಆದೇಶ ತಿಳಿಸಿ ಯಾವ ಸಮಯದಲ್ಲೂ ಹೊರಡಲು ತಯಾರಿರಬೇಕೆಂದು ಹೇಳಿ ರೂಮಿಗೆ ಬಂದರು. ಮೆಸ್ಸಿಗೆ ಹೋಗಿ ಉಳಿದ ಜೇಸಿಓಗಳೊಂದಿಗೆ ಒಂದುಪೆಗ್ ರಮ್ ಸೇವಿಸಿ ಊಟಕ್ಕೆದ್ದರು. ಇದವರ ಸಾಮಾನ್ಯ ದಿನಚರಿ.

ಪೆಟ್ರೋಲಿಂಗ್ ನಡೆಯುತ್ತಿತ್ತು. ಶನಿವಾರ ರಾತ್ರಿ ಒಂದುಗಂಟೆ ಸುಮಾರಿಗೆ ಸುಬೇದಾರರ ತಂಡ ಹೊರಟಿತ್ತು. ತಂಡದಲ್ಲಿ ಹವಾಲ್ದಾರ ಪರಶುರಾಮ, ಲಾನ್ಸ್‌ನಾಯ್ಕ ದೀನದಯಾಳ, ಸಿಪಾಯಿ ಕದಿರವೇಲು ಇದ್ದರು. ಒಂದು ಪಿಕೆಟ್ ನೋಡಿಕೊಂಡು ಎರಡನೇದರ ದಾರಿಯಲ್ಲಿರುವಾಗ ದೇವದಾರು ಮರವೊಂದರ ಹಿಂದೆ ಏನೋ ಚಲಿಸಿದಂತಾಯಿತು. 'ಯಾರದು? ನಿಲ್ಲು, ಗುರುತಿಸಿಕೋ' ರೈಫಲ್‌ಗಳನ್ನು ಗುರಿಹಿಡಿದು ಆದೇಶಿಸಿದರು. ಯಾರೂ ಬರಲಿಲ್ಲ. ಕತ್ತಲೆಯಿಂದ ಗ್ರನೇಡೊಂದು ಹಾರಿಬಂತು. ಪಕ್ಕಕ್ಕೆ ಜಿಗಿಯುತ್ತಿದ್ದಂತೆ ಅದು ಬಿದ್ದು ಸಿಡಿಯಿತು. ಅದು ಬಂದ ಸ್ಥಳದತ್ತ ಸ್ಟೆನ್‌ಗನ್, ರೈಫಲ್‌ಗಳು ಸತತವಾಗಿ ಬೆಂಕಿಯುಗುಳಿದುವು. ಒಬ್ಬ ನುಸುಳುಕೋರ ಬಲಿಯಾದ. ಉಳಿದವರು ಎಷ್ಟಿದ್ದರೋ ಗೊತ್ತಾಗಲಿಲ್ಲ. ನರಸಪ್ಪನವರಿಗೆ, ಕದಿರವೇಲುಗೆ ಗಿಡಗಂಟಿಗಳು ತರಚಿ ಸಣ್ಣ ಗಾಯಗಳಾಗಿದ್ದುವು. ಪರಶುರಾಮ ಮತ್ತು ದೀನದಯಾಳ ಗಂಭೀರವಾಗಿ ಗಾಯಗೊಂಡಿದ್ದರು. ತಕ್ಷಣ ಆಸ್ಪತ್ರೆಗೆ ಸಾಗಿಸಿದರೂ ಬೆಳಿಗ್ಗೆ ತೀರಿಕೊಂಡರು.

★★★

ಹತ್ತುದಿನ ಹಿಂದಷ್ಟೇ ಹೋದ ನರಸಪ್ಪ ಮತ್ತೆ ಊರಿಗೆ ಬಂದಿದ್ದರು. ಈ ಬಾರಿ ರಜೆಯ ಮೇಲಲ್ಲ; ಕರ್ತವ್ಯದ ಮೇಲೆ. ಕರ್ತವ್ಯ ನಿರ್ವಹಿಸುತ್ತಾ ಹುತಾತ್ಮನಾದ ಊರ ಪುತ್ರನ ಶವದೊಂದಿಗೆ. ಸಂಗಡ ಕುಲುಗುಟ್ಟುವ ಬಾಟಲುಗಳಿರಲಿಲ್ಲ. ಮನೆಯವರಿಗೆ ಮಗನ ಶವವನ್ನು ಹಸ್ತಾಂತರಿಸುವ ಪೀಡೆ ಹೊತ್ತು ಬಂದಿದ್ದರು. ಪೊಲೀಸರು, ಕ್ಷೇತ್ರದ ರಾಜಕೀಯ ನಾಯಕರು, ಬಂಧು ಬಾಂಧವರು, ಊರಜನ ಸೇರಿದ್ದರು. ದೇಹವನ್ನು ಶಾಲೆಯ ಮೈದಾನದಲ್ಲಿ ಗೌರವ ಸಲ್ಲಿಸಲು ಇಡಲಾಗಿತ್ತು. ಪರಿಚಿತರು ನರಸಪ್ಪನವರನ್ನ ಹತ್ತಾರು ಪ್ರಶ್ನೆ ಕೇಳುತ್ತಿದ್ದರು. ಎಚ್ಚರಿಕೆಯಿಂದ ಉತ್ತರಿಸುತ್ತಿದ್ದರು. ಪರಶುರಾಮನ ತಾಯಿ ಇವರನ್ನ ಕಂಡವಳು ಕೇಳಿದ್ದಳು: 'ನರಸಪ್ಪ, ನನ್ನ ಮಗನ ಜೊತೆ ಅಲ್ಲಿ ನೀನೂ ಇದ್ದೆ ಅಲ್ವಾ?'

'ಹೌದಮ್ಮ... ನಾವು ನಾಲ್ಕು ಜನರಿದ್ವಿ.'

'ಮತ್ತೆ ಅದ್ಹೇಗೆ ಅವನು ಮಾತ್ರ ಸತ್ತ?'